ಎಫ್‌ಆರ್‌ಪಿ

'ಎಫ್‌ಆರ್‌ಪಿ' ಎಂದರೆ 'ಫೇರ್ ಆಂಡ್ ರೆಮ್ಯುನರೇಟಿವ್ ಪ್ಲೈಸ್' (ನ್ಯಾಯಯುತ ಮತ್ತು ಪ್ರತಿಫಲದಾಯಕ ಬೆಲೆ). ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಗೆಗಾರರಿಂದ ಖರೀದಿಸುವ ಕಬ್ಬಿಗೆ ಕಾನೂನುಬದ್ಧವಾಗಿ ಪಾವತಿಸಬೇಕಾದ ಬೆಲೆಯನ್ನು 'ಎಫ್‌ಆರ್‌ಪಿ' ಎಂದು ಕರೆಯಲಾಗುತ್ತದೆ. ಇದನ್ನು ಕೇಂದ್ರ ಸರಕಾರವು ಘೋಷಿಸುತ್ತದೆ.

ಕೇಂದ್ರ ಸರಕಾರವು 2009ರಲ್ಲಿ 'ಕಬ್ಬು (ನಿಯಂತ್ರಣ) ಆದೇಶ, 1966'ಕ್ಕೆ ತಿದ್ದುಪಡಿ ತರುವ ಮೂಲಕ ಈ ವ್ಯವಸ್ಥೆಯನ್ನು ಜಾರಿಗೆ ತಂದಿತು. ಇದು ಹಳೆಯ 'ಸ್ಟ್ಯಾಚುಟರಿ ಮಿನಿಮಮ್ ಪ್ರೈಸ್' (ಶಾಸನಬದ್ಧ ಕನಿಷ್ಠ ಬೆಲೆ) ವ್ಯವಸ್ಥೆಯನ್ನು ಬದಲಿಸಿತು. ಕೃಷಿ ಮೆಚ್ಚುಗೆಯ ಮತ್ತು ಬೆಲೆಗಳ ಆಯೋಗದ(ಸಿಎಸಿಪಿ) ಶಿಫಾರಸಿನ ಮೇರೆಗೆ ಕೇಂದ್ರ ಸಚಿವ ಸಂಪುಟವು ಇದನ್ನು ಅನುಮೋದಿಸುತ್ತದೆ. ಕಾರ್ಖಾನೆಗಳು ರೈತರಿಗೆ ನೀಡಲೇಬೇಕಾದ ಕನಿಷ್ಠಮೊತ್ತವನ್ನು ಇದು ನಿರ್ಧರಿಸುತ್ತದೆ. ಕಬ್ಬಿನಿಂದ ಹೆಚ್ಚು ಸಕ್ಕರೆ ಪ್ರಮಾಣದ ರಿಕವರಿಯಂತೆ ರೈತರಿಗೆ ಹೆಚ್ಚು ಬೆಲೆ ದೊರಕಿಸಿಕೊಡುವುದರಿಂದ ಉತ್ತಮ ಕೃಷಿ ವಿಧಾನಗಳ ಅನುಸರಣೆಯನ್ನು ಪ್ರೋತ್ಸಾಹಿಸುತ್ತದೆ. ಅಲ್ಲದೆ ರೈತರಿಗೆ ನಿಗದಿತ ಆದಾಯಗಳಿಗೆ ಹಣ ಸಂದಾಯವಾಗುವುದನ್ನು ಈ ವ್ಯವಸ್ಥೆ ಖಚಿತಪಡಿಸುತ್ತದೆ. ಎಫ್‌ಆರ್‌ಪಿ ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುತ್ತದೆ. ಸುಮಾರು 5 ಕೋಟಿ ಕಬ್ಬುಬೆಗೆಗಾರರಿಗೆ ಆರ್ಥಿಕ ಭದ್ರತೆ ನೀಡಿದಂತೆ ಮೂಲಕ ಅವರ ಜೀವನಮಟ್ಟ ಸುಧಾರಿಸುತ್ತದೆ. ರೈತರಿಗೆ ಖಚಿತ ಆದಾಯ ಸಿಗುವುದರಿಂದ ಅವರು ಕೃಷಿಯಲ್ಲಿ ಹೂಡಿಕೆ ಮಾಡಲು ಪ್ರೇರಣೆ ದೊರೆಯುತ್ತದೆ. ಇದರಿಂದ ಸಕ್ಕರೆ ಉದ್ಯಮದಲ್ಲಿನ ಸ್ಥಿರತೆ ಸ್ವಾಭಾವಿಯಾಗಿ ಗ್ರಾಮೀಣ ಭಾಗದಲ್ಲಿನಗರದ ಚಲಾವಣೆ ಹೆಚ್ಚುತ್ತದೆ.

ಸರಕಾರಿ ಪ್ರೌಢಶಾಲೆಗಳಿಗೆ ಪ್ರಯೋಗಾಲಯ

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಸುಸಜ್ಜಿತ ಪ್ರಯೋಗಾಲಯ

347 ಸರಕಾರಿ ಪ್ರೌಢಶಾಲೆಗಳಿಗೆ ಸಿಗಲಿದೆ ಲ್ಯಾಬ್ ಸೌಲಭ್ಯ

'ಸಮಗ್ರ ಶಿಕ್ಷಣ ಕರ್ನಾಟಕ'ದಡಿ 3.47 ಕೋಟಿ ರೂ. ಮೀಸಲು

200ಕ್ಕಿಂತ ಹೆಚ್ಚು ದಾಖಲಾತಿ ಇರುವ ಶಾಲೆಗಳಿಗೆ ಭಾಗ್ಯ

■ ಶಾಂತಾಮೂರ್ತಿ ಬೆಂಗಳೂರು
shantha.a@timesofindia.com

ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಐಕಿಯಾಸಿಕ ಸಾಧನೆ ದಾಖಲಿಸಲ ಬೆನ್ನಲ್ಲೇ ರಾಜ್ಯದ ಸರಕಾರಿ ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಮತ್ತಷ್ಟು ಸೌಲಭ್ಯ ವಿಸ್ತರಿಸಲು ಸರಕಾರ ಮುಂದಾಗಿದೆ. 2026-27ನೇ ಶೈಕ್ಷಣಿಕ ವರ್ಷದಿಂದ ರಾಜ್ಯದ 347 ಸರಕಾರಿ ಪ್ರೌಢಶಾಲೆಗಳಲ್ಲಿ ಸುಸಜ್ಜಿತ ವಿಜ್ಞಾನ ಪ್ರಯೋಗಾಲಯಗಳ ನಿರ್ಮಾಣಕ್ಕೆ ತಯಾರಿ ನಡೆದಿದ್ದು, ಇದಕ್ಕಾಗಿ 3.47 ಕೋಟಿ ರೂ. ಮೀಸಲಿಡಲಾಗಿದೆ.

ಗ್ರಾಮೀಣ ಭಾಗದ ಸರಕಾರಿ ಶಾಲೆಗಳೂ ಸೇರಿದಂತೆ ಗರಿಷ್ಠ 200ರಷ್ಟು ವಿದ್ಯಾರ್ಥಿಗಳು ದಾಖಲಾತಿ ಹೊಂದಿರುವ ಸರಕಾರಿ ಪ್ರೌಢಶಾಲೆಗಳಿಗೆ ಸುಸಜ್ಜಿತ ಪರಿಕರಗಳನ್ನು ಒದಗಿಸುವ ಜತೆಗೆ, ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ವಿಜ್ಞಾನ ಕಲಿಯಲು ನೆರವಾಗುವಂತೆ ಸರಕಾರ ಯೋಜನೆ ರೂಪಿಸಿದೆ. ವಿಜ್ಞಾನ ವಿಷಯಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ ಹಾಗೂ ಜೀವಶಾಸ್ತ್ರಗಳ ಪ್ರಾಯೋಗಿಕ ಕಲಿಕೆಗೆ ಈ ಪ್ರಯೋಗಾಲಯಗಳು ಮಕ್ಕಳಿಗೆ ಸಹಕಾರಿಯಾಗಲಿವೆ. ತರಗತಿಯ ಪಾಠಗಳ ಜತೆಗೆ, ಪ್ರಯೋಗಾಲಯಗಳಲ್ಲಿ ಪ್ರಾಯೋಗಿಕವಾಗಿ ಕಲಿಯುವುದರಿಂದ ವಿದ್ಯಾರ್ಥಿಗಳ ಕಲಿಕಾ ಮಟ್ಟ ಮತ್ತಷ್ಟು ವೃದ್ಧಿಸಲಿದೆ ಎಂಬ ಉದ್ದೇಶದಿಂದ ಈ ಯೋಜನೆ ಜಾರಿಗೆ ತಯಾರಿ ನಡೆದಿದೆ.

ಈಗಾಗಲೇ ರಾಜ್ಯದ ಹಲವು ಸರಕಾರಿ ಪ್ರೌಢಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯಗಳು ಬಳಕೆಯಲ್ಲಿವೆ. ಆದರೆ, ಬಹುತೇಕ ಪ್ರಯೋಗಾಲಯಗಳಲ್ಲಿ ಸೂಕ್ತ ಉಪಕರಣಗಳ ಲಭ್ಯತೆ ಇಲ್ಲದಿರುವುದು ವಿದ್ಯಾರ್ಥಿಗಳ ಕಲಿಕೆ ಮೇಲೆ ಪರಿಣಾಮ ಬೀರುತ್ತಿದೆ. ಇದಿಗ ಆಯ್ದ 347 ಶಾಲೆಗಳಲ್ಲಿ, ಸುಸಜ್ಜಿತ ಪ್ರಯೋಗಾಲಯ ಒದಗಿಸಲು ಸಮಗ್ರ ಶಿಕ್ಷಣ ಕರ್ನಾಟಕ ಅನುದಾನ ಒದಗಿಸಲಿದೆ.

ವೈಜ್ಞಾನಿಕ ಮನೋಭಾವ ಬೆಳೆಸಲು ಕ್ರಮ

ಪ್ರಯೋಗಾಲಯಗಳಲ್ಲಿ ವಿದ್ಯಾರ್ಥಿಗಳು ಸ್ವತಃ ಪ್ರಯೋಗ ಮಾಡುವ ಮೂಲಕ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಲು ಸಹಕಾರಿಯಾಗಿದೆ. ಈ ಯೋಜನೆಯು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ವಿಜ್ಞಾನ ಶಿಕ್ಷಣವನ್ನು ಉತ್ತಮವಾಗಿ ತಲುಪಿಸುವ ಗುರಿ ಹೊಂದಿದೆ. ಮೂಲಸೌಕರ್ಯಗಳ ಕೊರತೆಯಿಂದ ಅಕ್ಷರಶಃ ಕಳೆದುಕೊಳ್ಳತ್ತಿರುವ ಸರಕಾರಿ ಶಾಲೆಗಳಿಗೆ ಈ ಯೋಜನೆಯಿಂದ ಮರುಚೇತನ ಸಿಗುವ ನಿರೀಕ್ಷೆಯಿದೆ. ಹಾಗಾಗಿ ಶಾಲೆಗಳ ಮಕ್ಕಳಿಗೆ ಸರಿಸಮನಾಗಿ ಸರಕಾರಿ ಶಾಲೆ ವಿದ್ಯಾರ್ಥಿಗಳು ವಿಜ್ಞಾನ ವಿಷಯಗಳಲ್ಲಿ ಮುಂಚೂಣಿಯಲ್ಲಿರಲು ಆತ್ಮ ಸ್ಥೈರ್ಯ ಸಿಗಲಿದೆ. ಜತೆಗೆ, ವಿದ್ಯಾರ್ಥಿಗಳು ಪ್ರಾಯೋಗಿಕ ಜ್ಞಾನದ ಮೂಲಕ ವಿಜ್ಞಾನವನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಸಹಕಾರಿಯಾಗಲಿದೆ.

ಆರು ಜಿಲ್ಲಾಸ್ಪತ್ರೆಗಳಿಗೆ ಎಂಆರ್‌ಐ ಯಂತ್ರ

■ ವಿಕ ಸುದ್ದಿಲೋಕ ಬೆಂಗಳೂರು

ರಾಷ್ಟ್ರೀಯ ಆರೋಗ್ಯ ಅಭಿಯಾನದ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದಡಿ ಬೆಂಗಳೂರು ನಗರ ಸೇರಿದಂತೆ ಆರು ಜಿಲ್ಲಾಸ್ಪತ್ರೆಗಳಿಗೆ ಎಂಆರ್‌ಐ ಸ್ಕ್ಯಾನಿಂಗ್ ಯಂತ್ರ ಪೂರೈಕೆಗೆ ಆರೋಗ್ಯ ಇಲಾಖೆ ಮುಂದಾಗಿದೆ.

ಇತ್ತೀಚೆಗಷ್ಟೆ ಖಾಸಗಿ ಕಂಪನಿಯೊಂದು ಸರಕಾರಿ ಆಸ್ಪತ್ರೆಗಳಿಗೆ ಒದಗಿಸಿದ್ದ ಎಂಆರ್‌ಐ ಉಪಕರಣಗಳಿಂದ ಪಲಿವೆಗೆ ಸಮಸ್ಯೆ ಉಂಟಾಗಿತ್ತು. ಅದರ ಬೆನ್ನಲ್ಲೇ ಈಗ ಆರೋಗ್ಯ ಇಲಾಖೆ ಎಚ್ಚೆತ್ತು ಕಾನೇ ಉಪಕರಣ ಪೂರೈಸುತ್ತಿದೆ.

ಶಕಾ 13.50 ಕೋಟಿ ರೂ. ವೆಚ್ಚದಲ್ಲಿ ಒಟ್ಟು 81 ಕೋಟಿ ರೂ.ಗಳಲ್ಲಿ 6 ಎಂಆರ್‌ಐ ಸ್ಕ್ಯಾನ್ ಯಂತ್ರಗಳನ್ನು ಖರೀದಿಸಿ ಜಿಲ್ಲಾ ಆಸ್ಪತ್ರೆಗಳಿಗೆ ಒದಗಿಸಲು ಆರೋಗ್ಯ ಇಲಾಖೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ಸೂಕ್ತ ಎಂಆರ್‌ಐ ಯಂತ್ರಗಳನ್ನು ದಾವಣಗೆರೆ, ಮೈಸೂರು, ಧಾರವಾಡ, ಬಾಗಲಕೋಟೆ, ರಾಮನಗರ ಜಿಲ್ಲಾಸ್ಪತ್ರೆ ಹಾಗೂ ಬೆಂಗಳೂರಿನ ಕೆ.ಸಿ. ಜನರಲ್ ಆಥವಾ ಜಯನಗರ ಜಿಲ್ಲಾಸ್ಪತ್ರೆಗಳಿಗೆ ಒದಗಿಸಲು ಸೂಚಿಸಲಾಗಿದೆ.

ಉದ್ದೇಶಿತ ಯಂತ್ರಗಳ ಗುಣಮಟ್ಟದ ಕುರಿತು ಖಚಿತಪಡಿಸಿಕೊಳ್ಳಿರಿಸು. ಯಾವುದೇ ಹುದ್ದೆಗಳನ್ನು ಸೃಜಿಸದೆ ಲಭ್ಯವಿರುವ ಮಾನವ ಸಂಪನ್ಮೂಲವನ್ನೇ ಬಳಸಿಕೊಂಡು ಕಾರ್ಯನಿರ್ವಹಣೆ ಮಾಡಬೇಕು ಎಂದು ಪಹರು ಏಫಿಸಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಕೆಎಎಸ್ ಸಂದರ್ಶನ ಪ್ರಕ್ರಿಯೆ ಆರಂಭ

ಮೊದಲ ದಿನ ಸುಗಮವಾಗಿ ನಡೆದ ವಿಶೇಷಚೇತನರ ವ್ಯಕ್ತಿತ್ವ ಪರೀಕ್ಷೆ

■ ವಿಕ ಸುದ್ದಿಲೋಕ ಬೆಂಗಳೂರು

ಕೆಎಎಸ್ ಮುಖ್ಯ ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಬುಧವಾರದಿಂದ ಸಂದರ್ಶನ ಪ್ರಕ್ರಿಯೆ ಆರಂಭವಾಗಿದೆ.

"ಮೊದಲ ದಿನ ವಿಶೇಷಚೇತನರ ವ್ಯಕ್ತಿತ್ವ ಪರೀಕ್ಷೆ ಅತ್ಯಂತ ಸುಗಮವಾಗಿ ನಡೆದಿದೆ. ಈಗಾಗಲೇ ನಿಗದಿಯಾಗಿರುವ ವೇಳಾಪಟ್ಟಿಯಂತೆ ಮತ್ತು ಪ್ರಮಾಣೀಕೃತ ಕಾರ್ಯಚರಣೆ ವಿಧಾನದಂತೆ ಸಂದರ್ಶನ ಪ್ರಕ್ರಿಯೆ ಮುಂದುವರಿಯಲಿದೆ," ಎಂದು ಆಯೋಗದ ಕಾರ್ಯದರ್ಶಿ ಕೆ.ಜ್ಯೋತಿ 'ಎಕೆ'ಕ್ಕೆ ತಿಳಿಸಿದ್ದಾರೆ.

ಕರ್ನಾಟಕ ಲೋಕಸೇವಾ ಆಯೋಗ ಮೇ 6ಂದ ಬೆ.10.00ವರೆಗೆ ವ್ಯಕ್ತಿತ್ವ ಪರೀಕ್ಷೆ ಹಾಗೂ ಮೂಲ ದಾಖಲಿಗಳ ಪರಿಶೀಲನಾ ಕಾರ್ಯ ನಡೆಸಲಿದ್ದು, ಅದರ ವೇಳಾಪಟ್ಟಿಯನ್ನು ಈಗಾಗಲೇ ಪ್ರಕಟಿಸಿದೆ.

2023-24ನೇ ಸಾಲಿನಲ್ಲಿ ಕೆಎಎಸ್ ಅಧಿಕಾರಿಗಳ 384 ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ ನೇಮಕಕ್ಕೆ ಮುಖ್ಯ ಪರೀಕ್ಷೆಯಿಂದ ವ್ಯಕ್ತಿತ್ವ ಪರೀಕ್ಷೆಗೆ 1:13ರ ಅನುಪಾತದಲ್ಲಿ 1,158 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಜತೆಗೆ, ಸಿದ ಅಭ್ಯರ್ಥಿಯ ಸಂದರ್ಶನ ಪ್ರಕ್ರಿಯೆಯಲ್ಲಿ ಭಾಗವಹಿಸುವುದಿಲ್ಲವೆಂದು ಲಿಖಿತವಾಗಿ ತಿಳಿಸಿದ ಅಭ್ಯರ್ಥಿಗಳ ಸ್ಥಾನಕ್ಕೆ ಮೀಸಲಿಟ್ಟ ಅಭ್ಯರ್ಥಿಗಳ ಪಟ್ಟಿಯಿಂದ ಹೊರಗಿಳಿಯಬೇಕು.

ಸದ್ಯ ರಾಮಕೃಷ್ಣ ಪ್ರಸಾದ್ ಅವರ ಪುತ್ರಿ ಸಂದರ್ಶನಕ್ಕೆ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಅವರು ಈಗಿದ ಏ.27ರಂದೇ ತಮ್ಮ ಪುತ್ರಿಯ ಸಂದರ್ಶನದ ದಿನ ಹಾಗೂ ಅದರಹಿಂದ ಮೂರ್ನಾಲ್ಕು ದಿನ ಸಂದರ್ಶನ ಪ್ರಕ್ರಿಯೆಯಲ್ಲಿ ಭಾಗವಹಿಸುವುದಿಲ್ಲವೆಂದು ಲಿಖಿತವಾಗಿ ತಿಳಿಸಿದ್ದಾರೆ. ಈ ಬಗ್ಗೆ ಕೆಪಿಎಸ್‌ಸಿ ಕಾರ್ಯದರ್ಶಿ ಆರೋಗದ ಕಾನೂನು ಕೋಶದ ಅಭಿಪ್ರಾಯ ಪಡೆದಿದ್ದಾರೆ. ಕಾನೂನು ಕೋಶವೂ 'ಸದ್ಯದರ ಪುತ್ರಿ ಭಾಗವಹಿಸುವ ಸಂದರ್ಶನ ಮಂಡಳಿಯಿಂದ ಮಾತ್ರ ಹೊರಗಿಳಿಯ, ಇತರರ ಭಾಗವಹಿಸಬಹುದು' ಎಂದು ಹೇಳಿದೆ. ನಿಯಮಗಳಲ್ಲಿ ಅವಕಾಶ ಇರುವುದರಿಂದ ಆ ಸದ್ಯರನ್ನು ಇಡೀ ಸಂದರ್ಶನ ಪ್ರಕ್ರಿಯೆಯಿಂದ ಹೊರಗಿಡಲಾಗದು ಎಂದು ಹೇಳಲಾಗುತ್ತಿದೆ.

ಸದಸ್ಯರೊಬ್ಬರ ಪುತ್ರಿಯ ಸಂದರ್ಶನ ಹಾಜರಿ ವಿವಾದ

ಆಯೋಗದ ಮರ್ಯಾದೆ ಉಳಿಸಿ

ತಾ ಮದ್ದೆ. ಶಾಸಕ ಎಸ್.ಸುರೇಶ್ ಕುಮಾರ್ ತಮ್ಮಸಾಮಾಜಿಕ ಜಾಲತಾಣದಲ್ಲಿ ತಾ ವಿವರಗಳನ್ನು ಹಂಚಿಕೊಂಡು, "ಸಂದರ್ಶಕ್ಕೆ ಆಯ್ಕೆಯಾದವರ ಶಿಫ್ರಿಯಲ್ಲಿ ಪ್ರತ್ಯೆಯೇ ಇರುವುದರಿಂದ ಇಡೀ ಸಂದರ್ಶನ ಪ್ರಕ್ರಿಯೆಯಲ್ಲಿ ಸದಸ್ಯ (ರಾಮಕೃಷ್ಣಪ್ರಸಾದ್) ಭಾಗವಹಿಸಲು ಅವಕಾಶವಿಲ್ಲ, ಅದರೂ ಭಾಗವಹಿಸುತ್ತಿದ್ದು, ಮುಖ್ಯಮಂತ್ರಿಗಳು ತಾ ಕುರುತು ತುರುಗ ಗಮನ ಹರಿಸಿ ಬೋಣೇಣಾ ಆಯೋಗದ ಮರ್ಯಾದೆ ಉಳಿಸುವ ಕೃಮ ಕೈಗೊಳ್ಳಿರಿಸು" ಎಂದು ಆಗ್ರಹಿಸುತ್ತಿದ್ದಾರೆ.

ನಿಯಮಗಳಲ್ಲಿ ಅವಕಾಶ: ಈ ಮದ್ದೆ, ಕೆಪಿಎಸ್‌ಸಿ ಹಾಲಿ ಸದಸ್ಯರಾದ ಎಂ.ಎ.ರಾಮಕೃಷ್ಣಪ್ರಸಾದ್ ಪುತ್ರಿ ಮದ್ದೆ ಪರೀಕ್ಷೆಯಲ್ಲಿ ಆಯ್ಕೆಯಾಗಿ ಸಂದರ್ಶನಕ್ಕೆ ಅರ್ಹತೆ ಪಡೆದಿದ್ದಾರೆ. ನಿಯಮದ ಪ್ರಕಾರ, ಯಾವುದೇ ಸದಸ್ಯರ ಮಕ್ಕಳವರು ಅಥವಾ ಸಂಬಂಧಿಗಳು ಸಂದರ್ಶನಕ್ಕೆ ಹಾಜರಾಗುವಂತಿದ್ದರೆ ಆ ಬಗ್ಗೆ ಸಂಬಂಧಿಸಿದ ಸದ್ಯರು ಮೊದಲೇ ಮಾಹಿತಿ ನೀಡಬೇಕು ಮತ್ತು ಆ ಸಂಬಂಧಿ ಹೈಕೋರ್ಟ್ ಆದೇಶದಂತೆ ಆರು ಅಭ್ಯರ್ಥಿಗಳ ಸಂದರ್ಶನವನ್ನೂ ನಡೆಸಲು ಆಯೋಗ ನಿರ್ಧರಿಸಿದೆ.

> ಸಂದರ್ಶನ ಪ್ರಕ್ರಿಯೆ ಸುಗಮವಾಗಿ ಆರಂಭವಾಗಿದ್ದು, ನಿಗದಿಯಂತೆ ನಡೆಯಲಿದೆ. ಸದ್ಯರೊಬ್ಬರ ಪುತ್ರಿ ಸಂದರ್ಶಕ್ಕೆ ಆಯ್ಕೆಯಾಗಿದ್ದು, ಆ ಸದ್ಯರೇ ತಮ್ಮ ಪುತ್ರಿಯ ಸಂದರ್ಶನದ ದಿನ ಪ್ರಕ್ರಿಯೆಯಲ್ಲಿ ಭಾಗವಹಿಸುವುದಿಲ್ಲೆಂದು ಘೋಷಿಸಿದ್ದಾರೆ.
>
> **-ಕೆ.ಜ್ಯೋತಿ** ಕಾರ್ಯದರ್ಶಿ, ಕೆಪಿಎಸ್‌ಸಿ

ಡಿಜಿಪಿ ರಾಮಚಂದ್ರರಾವ್ ಅಮಾನತು ವಾಪಸ್

■ ವಿಕ ಸುದ್ದಿಲೋಕ ಬೆಂಗಳೂರು

ಮಹಿಳೆ ಜತೆಗಿನ ರಾಸಲೀಲೆ ಪ್ರಕರಣದಲ್ಲಿ ಸೇವೆಯಿಂದ ಅಮಾನತುಗೊಂಡಿದ್ದ ಡಿಜಿಪಿ ಡಾ.ರಾಮಚಂದ್ರರಾವ್ ಅವರಿಗೆ ರಾಜ್ಯ ಸರಕಾರ ಬಗ್ ರಿಲೀಫ್ ನೀಡಿದೆ. ಅಮಾನತು ಆದೇಶ ಬುಧವಾರ ಹೊಡಬಡಿರುವ ಸರಕಾರವು ಸಿಐಡಿ ವಿಶೇಷ ಹಾಗೂ ಆರ್ಥಿಕ ಘಟಕಗಳ ಮುಖ್ಯಸ್ಥರ ಜವಾಬ್ದಾರಿ ನೀಡಿದೆ.

ಮೇ ಅಂತ್ಯಕ್ಕೆ ಸೇವೆಯಿಂದ ನಿವೃತ್ತರಾಗಿರುವ ರಾಮಚಂದ್ರರಾವ್ ಅವರ ಅಮಾನತು ಹಿಂಪಡೆದಿದೆ. ಇದರಿಂದ ಅಮಾನತಿನಲ್ಲಿದ್ದಾಗಲೇ ಸೇವೆಯಿಂದ ನಿವೃತ್ತಿಗೊಂಡ ಮುಜುಗರ ತಪ್ಪಿದೆ. ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ (ಡಿಸಿಆರ್‌ಇ) ಡಿಜಿಪಿ ಆಗಿದ್ದ ರಾಮಚಂದ್ರರಾವ್ ಮಹಿಳೆಯೊಬ್ಬರ ಜತೆ ಪೊಲೀಸ್ ಸಮವಸ್ತ್ರದಲ್ಲಿಯೇ ಅಸಭ್ಯವಾಗಿ ವರ್ತಿಸಿದ ವಿಡಿಯೊ ಬಿಡುಗಡೆಯಾಗಿದ್ದರು ಅಕ್ಟೋಬರ್ ಅಂತ್ಯದಲ್ಲಿ ಅವರ ವರ್ತನೆಗೆ ಸರ್ಕಾರದಿಂದ ಕಲಿಯಲ್ಪಟ್ಟವ್ಯಾಪಕ ಟೀಕೆವ್ಯಕ್ತವಾಗಿತ್ತು. ಈ ಬೆನ್ನಲ್ಲೇ ರಾಮಚಂದ್ರರಾವ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಸರಕಾರ ಆದೇಶಿಸಿತ್ತು.

ಪೈರಲ್ ಆಗಿದ್ದ ವಿಡಿಯೊ ಆಗಲಿಯೇ ನಕಲಿಯೇ ಎಂಬುದರ ಬಗ್ಗೆ ಇಲಾಖೆಯಿಂದ ಆಂತರಿಕ ತನಿಖೆ ನಡೆಸಿತ್ತು. ವಿಡಿಯೊ ಆಸಲಿ ಎಂಬುದು ದೃಢಪಟ್ಟಿತ್ತು. ಕೆಳದವರ್ ಕೈದುಮಲಮಗಳು ರನ್ಯಾರಾವ್ ವಿದೇಶದಿಂದ ಚಿನ್ನಕಳ್ಳಾಗಾಗಿಗೆ ಶಿಷ್ಟಾಚಾರದ ದುರ್ಬಳಕೆ ಮಾಡಿಕೊಂಡಿದ್ದ ಆರೋಪವೂ ಕೇಳಿ ಬಂದಿತ್ತು. ಈ ಸಂದರ್ಭದಲ್ಲಿ ರಾಮಚಂದ್ರರಾವ್ ಅವರಿಗೆ ಕಡ್ಡಾಯ ರಜೆ ನೀಡಲಾಗಿತ್ತು.

ಸಿಐಡಿ ಮುಖ್ಯಸ್ಥರ ಹೊಣೆ ನೀಡಿದ ಸರಕಾರ

ನೀರಿಗೆ ಬಿದ್ದು ನಾಲ್ವರ ಸಾವು

ಕೃಷಿ ಹೊಂಡದಲ್ಲಿ ಬಿದ್ದ ಮಕ್ಕಳು | ಬೀಚ್‌ನಲ್ಲಿ ಅಲೆಗಳ ಹೊಡೆತಕ್ಕೆ ಇಬ್ಬರ ದುರ್ಮರಣ

■ ವಿಕ ಸುದ್ದಿಲೋಕ ಬಂಗಾರಪೇಟೆ (ಕೋಲಾರ)

ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ನೀರಿಗೆ ಬಿದ್ದು ಬಾಲಕ, ಬಾಲಕಿ ಸೇರಿ ನಾಲ್ವರು ಮೃತಪಟ್ಟಿದ್ದಾರೆ.

ತಾಲೂಕಿನ ಕಾಮಸಮುದ್ರ ಹೋಬಳಿಯ ಬೋಡೇನಹಳ್ಳಿ ಗ್ರಾಮದಲ್ಲಿ ಕಾಲು ಜಾರಿ ಕೃಷಿ ಹೊಂಡಕ್ಕೆ ಬಿದ್ದ ಕನಸ್ರೀ (15) ಹಾಗೂ ಕಾರ್ತಿಕ್ (8) ಮೃತಪಟ್ಟಿದ್ದಾರೆ.

ಕನ್ರೀ ಬೋಡೇನಹಳ್ಳಿಯ ಬಾಬು ಮತ್ತು ರೂಪ ದಂಪತಿ ಪುತ್ರಿ. ಕಾರ್ತಿಕ್ ವರದಾರಾಜಲು ಮತ್ತು ಶ್ಯಾಮಲಾ ದಂಪತಿಯ ಪುತ್ರ. ಮಂಗಳವಾರ ಸಂಜೆ ದುರಂತ ನಡೆದಿದೆ. ಇತ್ತೀಚೆಗೆ ನಿರ್ಮಿಸಿರುವ ಕೃಷಿ ಹೊಂಡಕ್ಕೆ ನೀರು ಬಿಟ್ಟಿರುವುದನ್ನು ನೋಡಲು ಇಬ್ಬರೂ ಹೋಗಿದ್ದಾಗ ಈ ಘಟನೆ ನಡೆದಿದೆ. ಮಕ್ಕಳ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಿದ್ದ ಅದೇ ಗ್ರಾಮದ ನಿವಾಸಿ ವೆಂಕಟೇಶಪ್ಪ(55) ಹೃದಯಾಘಾತದಿಂದ ಮೃತಪಟ್ಟಿ ಮತ್ತೊಂದು ಘಟನೆ ನಡೆದಿದೆ.

ಅಲೆಗಳ ಹೊಡೆತಕ್ಕೆ ನೀರುಪಾಲು: ಭೃಷ್ಟಳ (ಉ.ಕನ್ನಡ) ಮುಂಡಳ್ಳಿ ನಸ್ರಾರ ಬೀಚ್‌ಗೆ ಬುಧವಾರ ಏಕಾರಕ್ಕಿಂದು ತೆರಳಿದ್ದ ಇಬ್ಬರು ಅಲೆಗಳ ಹೊಡೆತಕ್ಕೆ ಸಿಲುಕಿ ನೀರಿಗೆ ಬಿದ್ದು ಮೃತಪಟ್ಟಿದ್ದಾರೆ. ಉತ್ತರಪ್ರದೇಶದ ಅಫೂಜ್ (38) ಹಾಗೂ ರಿಜ್ವಾನ್ ಖಾನ್ (28) ಮೃತಪಟ್ಟವರು. ಇವರು ಚೇಲರ್ ಕೆಲಸ ಮಾಡಿಕೊಂಡಿದ್ದರು. ಗೆಳೆಯೊಂದಿಗೆ ನಸ್ರಾರ ಬೀಚ್‌ಗೆ ತೆರಳಿ, ಅಲ್ಲಿನ ಕಲ್ಲು ಬಂಡೆ ಮೇಲೆ ಕುಳಿತಿದ್ದಾಗ ಅಲೆಯೊಂದು ಬಡಿದ ಪರಿಣಾಮ ಒಬ್ಬ ಜಾರಿ ಬೀಳುತ್ತಿದ್ದಾಗ ಇನ್ನೊಬ್ಬ ರಕ್ಷಣೆಗೆ ಧಾವಿಸಿ ಪ್ರಯತ್ನ ಫಲಿಸದೇ ಇಬ್ಬರೂ ನೀರು ಪಾಲಾಗಿದ್ದಾರೆ. ಡಿವೈಎಸ್ಪಿ ಗಿರೀಶ ಬಿ., ಭೃಷ್ಟಳ ಗ್ರಾಮೀಣ ಠಾಣಾ ಸಿಪಿಐ ವೆಂಕಟೇಶ ಮುರನಾಳ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಭೃಷ್ಟಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಾಗಿದೆ.

ತಿದ್ದುಪಡಿ

**ಸ್ಟೈಪ್ಡ್ ಟೋನರ್ ಎಕ್ಸಿಮೋಷರನ ವರ್ಗಾವಣೆ ಸಂಬಂಧ ಮುಕ್ತ ಪರಾಜು ಪ್ರಕ್